ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮತ್ತು ಸಾರ್ವಜನಿಕ ಉದ್ದು ಕೊರತೆಗಳ ಮಂತ್ರಿಗಳಿಂದ ಅನುಮೋದಿಸಲ್ಪಟ್ಟಿದೆ.

ಬಾಗಲಕೋಟೆ ಸಿಮೆಂಟ್ ಕಾರ್ಖಾನೆಯಲ್ಲಿ ಮುಷ್ಕರದ ಬಗ್ಗೆ

27 ಶ್ರೀ ಮಲ್ಲಿಕಾರ್ಜುನ ಬಸ್ಸಪ್ಪ ಗುಳ್ಳೇದ್ ಗುಡ್ಡ).--ಕಾರ್ಮಿಕ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :--

ಅ) ಬಾಗಲಕೋಟೆ ಸಿಮೆಂಟ್ ಕಾರ್ಖಾನೆಯ ನೌಕರರ ಸತ್ಯಾಗ್ರಹ ಸರಕಾರದವರ ಗಮನಕ್ಕೆ ಬಂದಿದೆಯೆ ;

ಆ) ಸರ್ಕಾರದ ಪರವಾಗಿ ಸಾನ್ಯ ಮುಖ್ಯ ಮಂತ್ರಿಗಳು ಮಧ್ಯಸ್ಥಿಕೆ ವಹಿಸಿ ಆಶ್ವಾಸನೆಕೊಟ್ಟು ಉಪವಾಸ ಸತ್ಯಾಗ್ರಹ ಕೈಬಿಡಲು ಕೇಳಿಕೊಂಡಿರುವುದು ನಿಜವೆ ;

ಇ) ಅವರು ಕೊಟ್ಟ ಆಶ್ವಾಸನೆಗಳೇನು ;

ಈ) ಆಶ್ವಾಸನೆಗಳನ್ನೂ ಜಾರಿಗೆ ತರಲು ವಿಳಂಬವಾಗಲು ಕಾರಣಗಳೇನು ;

ಉ) ಸಿಮೆಂಟ್ ಕಾರ್ಖಾನೆಯ ನೌಕರರ ಸತ್ಯಾಗ್ರಹ ಇನ್ನೂ ಮುಂದುವರೆದಿರುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಆಜೀಜ್‌ಸೇಟ್ (ಕಾರ್ಮಿಕ ಹಾಗೂ ವಕ್ಫ್ ಮಂತ್ರಿಗಳು).--ಅ) ಹೌದು.

ಆ) ಹೌದು.

ಇ) ಬಂದು ಒಪ್ಪಂದ ಏರ್ಪಡಿಸಲು ಸಾಧ್ಯವಾದ ಎಲ್ಲ ಪ್ರಯತ್ನಗಳನ್ನೂ ಮಾಡಲಾಗುವುದೆಂದು ಭರವಸೆ ಕೊಡಲಾಗಿತ್ತು.

ಈ) ಎರಡೂ ಪಕ್ಷದವರೊಂದಿಗೆ 14 ಮತ್ತು 15ನೇ ಫೆಬ್ರುವರಿಯಲ್ಲಿ ಕಾರ್ಮಿಕ ಮಂತ್ರಿಗಳು ಹಾಗೂ ಕಾರ್ಮಿಕ ಕಮೀಷನರ್‌ರವರು ಚರ್ಚೆ ನಡೆಸಿದರು. ಒಪ್ಪಂದ ಏರ್ಪಡಿಸಲು ಎರಡೂ ಪಕ್ಷದವರಿಗೆ ಕೆಲವು ಸೂಚನೆಗಳನ್ನೂ ಕೊಡಲಾಯಿತು. ಆದರೆ ಎರಡೂ ಪಕ್ಷದವರು ತಮ್ಮ ನಿಲುವನ್ನು ಬಿಟ್ಟುಕೊಡಲು ಒಪ್ಪದೆ ಇದ್ದುದರಿಂದ ಸಂಧಾನ ಆಗಲಿಲ್ಲ.

ಊ) ವಿವಾದವನ್ನು ನ್ಯಾಯಾಲಯಕ್ಕೆ ಒಪ್ಪಿಸಲಾಗಿದೆ. ಮುಷ್ಕರದ ಮುಂದುವರಿಕೆಯನ್ನೂ ನಿಷೇದಿಸಲಾಗಿದೆ ಮುಷ್ಕರವು ಮುಂದುವರಿಯುತ್ತಿಲ್ಲವೆಂದೂ ಕೆಲಸಗಾರರು ಕೆಲಸಕ್ಕೆ ಹಾಜರಾಗಿದ್ದಾರೆಂದೂ ವರದಿ ಬಂದಿದೆ.

ಶ್ರೀ ಎ ಲಕ್ಷ್ಮೀಸಾಗರ್(ಕಾನೂನು, ಸಂಸದೀಯ ವ್ಯವಹಾರಗಳ ಮಂತ್ರಿಗಳು).--ಸಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತಿ ರಾಜ್ಯ ಮಂತ್ರಿಗಳ ಹೆಸರಿನಲ್ಲಿರತಕ್ಕ ಈ ಕೆಳಗೆ ಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

(ಅ) ಗ್ರಾಮೀಣಾಭಿವೃದ್ಧಿಯ ಪ್ರಧಾನ ಯೋಜನೆಗಳ ಮೇಲಿನ ಶ್ವೇತ ಪತ್ರ ಹಾಗೂ

(ಆ) 1959ನೇ ಇಸವಿಯ ಕರ್ನಾಟಕ ಗ್ರಾಮಪಂಚಾಯಿತಿಗಳು ಹಾಗೂ ಸ್ಥಳೀಯ ಮಂಡಲಿಗಳ ಶಾಸನದ 246ನೇ ಕಲಮಿನ ಮೇರೆಗೆ ಹೊರಡಿಸಿದ 1982ನೇ ಇಸವಿಯ ಕರ್ನಾಟಕ ರಾಜ್ಯದ ಪಂಚಾಯಿತಿಗಳ (ನೇಕಗಳ ಮೇಲಿನ ನಿರ್ಭಂದ) (ತಿದ್ದುಪಡಿ) ನಿಯಮಗಳ ದಿನಾಂಕ ಜನವರಿ 28-29, 1983ನೇ ಆರ್. ಡಿ.ಪಿ.ಸಿ. 14 ಆರ್. ಪಿ. ಎ. 81ನೇ ಕ್ರಮಾಂಕದ ಅಧಿಸೂಚನೆ.

ಉಪಾಧ್ಯಕ್ಷರು. ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಗಿದೆ.

ಮನವಿಗಳು

ಶ್ರೀ ಯಡಿಯೂರಪ್ಪ.--ಸ್ವಾಮಿ ಕರ್ನಾಟಕ ರಾಜ್ಯದ ಮೂಲೆ ಮೂಲೆಗಳಿಂದ ಸ್ವೀಕೃಹಂಡರೀ ಪದವೀಧರರು ಸುಮಾರು 4-5 ಸಾವಿರ ಜನ ಬಂದಿದ್ದಾರೆ.

ಉಪಾಧ್ಯಕ್ಷರು.--ತಮ್ಮ ಪ್ರಶ್ನೆಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ತಾವು ನೋಟೀಸ್ ಕೊಡಿ

ಶ್ರೀ ಯಡಿಯೂರಪ್ಪ --ಇದು ನೋಟೀಸ್ ಕೊಡುವಂಥ ಪ್ರಶ್ನೆಯಲ್ಲ

ಶ್ರೀ ಪಂಪಾಪತಿ --ಬೆಂಗಳೂರಿಗೆ ಬಂದಿರತಕ್ಕ ಜನರನ್ನು ದಸ್ತಗಿರಿ ಮಾಡಿದ್ದಾರೆ.

ಉಪಾಧ್ಯಕ್ಷರು --ನಾನು ಸಾನ್ಯ ಸದಸ್ಯರುಗಳ ಭಾವನೆಯನ್ನು ಅರ್ಥಮಾಡಿಕೊಂಡಿದೆನೆ. ನಾನು ಬೆಳಿಗ್ಗೆ 10 ಗಂಟೆಗೆ ಕೊಠಡಿಗೆ ಬರುತ್ತೇನೆ. ತಾವು ಬನ್ನಿ, ಕೂಲಂಕಷವಾಗಿ ಸೂತನಾಮೋಣ ; ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ಪಂಪಾಪತಿ.--ಸ್ವಾಮಿ, ಸುಮಾರು ಜನರನ್ನು ದಸ್ತಗಿರಿ ಮಾಡಿದ್ದಾರೆ.